# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ-೫೮೩ ೨೭೬

### ಆಗಸ್ಟ್ ೨೭, ೨೦೨೪ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿ ೨೨೬ನೇ ಸಭೆಯ ನಡವಳಿಗಳು

| | |
|---|---|
| ೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು<br>ಇವರ ಪರವಾಗಿ ಶ್ರೀ ಬಸವರಾಜ ಹೂಗಾರ, ಜಂಟಿ ನಿರ್ದೇಶಕರು<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಲಬುರಗಿ | : ಸದಸ್ಯರು |
| ೦೩. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೪. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಶಿವಾನಂದ ಎಸ್. ವಿರಕ್ತಮಠ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ಶೈಲಜ ಇಂ. ಹಿರೇಮಠ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೭. ಡಾ. ಎ. ಶ್ರೀಧರ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು<br>ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ<br>ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ.<br>ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ. | |
| ೦೮. ಡಾ. ವಿಜಯ್ ಪೂಣಚ್ಚ ತಂಬಂಡ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೪. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೧೪.೦೬.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೫ನೇ ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೧೪.೦೬.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೫ನೇ ಸಭೆಯ ನಡವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೧೪.೦೬.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೫ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೧೪.೦೬.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೫ನೇ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೬.೦೧** ದಿನಾಂಕ ೦೮.೦೮.೨೦೨೪ರಂದು ನಡೆದ ಡೀನ್ ಸಮಿತಿ ಸಭೆಯ ನಡವಳಿಗಳ ಕುರಿತು.

**ಟಿಪ್ಪಣಿ** : ಕನ್ನಡ ವಿಶ್ವವಿದ್ಯಾಲಯದ ವಿವಿಧ ನಿಕಾಯಗಳ ಅಡಿಯಲ್ಲಿ ಬರುವ ಅಧ್ಯಯನ ವಿಭಾಗಗಳ ಪಿಎಚ್.ಡಿ. ಬಾಹ್ಯ ಮೌಲ್ಯಮಾಪಕರುಗಳ ಪಟ್ಟಿಯನ್ನು ಅಂತಿಮಗೊಳಿಸುವ ಸಂಬಂಧ ದಿನಾಂಕ ೦೮.೦೮.೨೦೨೪ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನ್ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ದಿನಾಂಕ ೦೮.೦೮.೨೦೨೪ರಂದು ನಡೆದ ಡೀನ್ ಸಮಿತಿ ನಡವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೬.೦೨** ಶ್ರೀ ಗಾನಯೋಗಿ ಪಂಚಾಕ್ಷರ ಪ್ರತಿಷ್ಠಾನ (ರಿ), ವಿಜಯಪುರ ಇವರು ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತಾ ಕೇಂದ್ರದ ಮಂಜೂರಾತಿಗಾಗಿ ದಿನಾಂಕ ೧೪.೦೬.೨೦೨೪ರ ಪತ್ರದ ಮೂಲಕ ಸಲ್ಲಿಸಿರುವ ಪ್ರಸ್ತಾವನೆ ಹಾಗೂ ಈ ಸಂಬಂಧ ಕೈಗೊಳ್ಳಲಾದ ಪ್ರಕ್ರಿಯೆಗಳ ಕುರಿತು.

ಟಿಪ್ಪಣಿ : ಸದರಿ ಪ್ರಸ್ತಾವನೆಯನ್ನು ಮಾನ್ಯ ಕುಲಪತಿಗಳ ಪರಿಶೀಲನೆ ನಂತರ ಈ ಸಂಬಂಧ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ. ದಿನಾಂಕ ೧೨.೦೭.೨೦೨೪ರಂದು ಶ್ರೀ ಗಾನಯೋಗಿ ಪಂಚಾಕ್ಷರ ಪ್ರತಿಷ್ಠಾನ (ರಿ), ವಿಜಯಪುರಕ್ಕೆ ಪರಿಶೀಲನಾ ಸಮಿತಿಯು ಭೇಟಿ ನೀಡಿ, ಸದರಿ ಸಂಸ್ಥೆಗೆ ಮಾನ್ಯತೆ ನೀಡಲು ಶಿಫಾರಸ್ಸು ಮಾಡಿದೆ. ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಿ, ಸಂಗೀತ ಮತ್ತು ನೃತ್ಯ ವಿಷಯಗಳಲ್ಲಿ (ಸ್ನಾತಕ) ಕಾರ್ಯಕ್ರಮ (ಕೋರ್ಸ್)ಗಳನ್ನು ನಡೆಸಲು ಮಾನ್ಯತೆ ನೀಡಿ ಅಧಿಸೂಚನೆ ಹೊರಡಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯ ಕುರಿತು ಸಭೆಯು ಪರಿಶೀಲಿಸಿ ಶ್ರೀ ಗಾನಯೋಗಿ ಪಂಚಾಕ್ಷಾರ ಪ್ರತಿಷ್ಠಾನ (ರಿ), ವಿಜಯಪುರ ಇವರಿಗೆ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ನೀಡಿ ಅಧಿಸೂಚನೆ ಹೊರಡಿಸಲು ಅನುಮೋದನೆ ನೀಡಿತು.

೨೨೬.೦೩ ದಿನಾಂಕ ೧೪.೦೮.೨೦೨೪ರಂದು ನಡೆದ ಖರೀದಿ ಸಮಿತಿ ಸಭೆಯ ನಡೆವಳಿಗಳ ಕುರಿತು.

ಟಿಪ್ಪಣಿ : ದಿನಾಂಕ ೧೪.೦೮.೨೦೨೪ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಖರೀದಿ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

೨೨೬.೦೪ ಕ್ಯಾಲಿಫೋರ್ನಿಯಾ ಕನ್ನಡ ಸಂಘಗಳ ಒಕ್ಕೂಟ ಪದಾಂತರಂಗ ಸಂಸ್ಥೆಯವರು ಕೋರಿರುವ ಕನ್ನಡ ಕಲಿಕಾ ಕೋರ್ಸ್ ಸಂಬಂಧ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಅಧ್ಯಯನ ಮಂಡಳಿ ಸಭೆ ನಡೆವಳಿಗಳ ಕುರಿತು.

ಟಿಪ್ಪಣಿ : ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಶೈಕ್ಷಣಿಕ ಅಧ್ಯಯನ ಮಂಡಳಿಯಲ್ಲಿ ಅಮೇರಿಕ ಕನ್ನಡ ಸಂಘಗಳ ಒಕ್ಕೂಟ ಕ್ಯಾಲಿಫೋರ್ನಿಯಾ ಪದಾಂತರಂಗ ಎಂಬ ಲಾಭರಹಿತ ಸಂಸ್ಥೆ ನಡೆಸಲು ಬಯಸಿರುವ ಕನ್ನಡ ಕಲಿಕೆ ಸರ್ಟಿಫಿಕೇಟ್ ಕೋರ್ಸ್ ನಡೆಸಲು ತೀರ್ಮಾನಿಸಿದ ಅಧ್ಯಯನ ಮಂಡಳಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ ಸದರಿ ಕೋರ್ಸ್ ಆರಂಭಿಸುವ ಸಂಬಂಧ ಸರ್ಕಾರದ ಅನುಮೋದನೆ ಪಡೆದು ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ನಿರ್ಣಯಿಸಿತು.

೨೨೬.೦೫ ಕನ್ನಡ ವಿಶ್ವವಿದ್ಯಾಲಯದ ೩೩ನೇ ನುಡಿಹಬ್ಬದ ಪ್ರಕ್ರಿಯೆಗಳನ್ನು ಆರಂಭಿಸುವ ಕುರಿತು.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ನಿಯಮಾನುಸಾರ ೩೩ನೇ ನುಡಿಹಬ್ಬದ ಪ್ರಕ್ರಿಯೆಗಳನ್ನು ಕೈಗೊಳ್ಳಲು ನಿರ್ಣಯಿಸಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೨೨೬.೦೬ ದಿನಾಂಕ ೧೬.೦೮.೨೦೨೪ರಂದು ನಡೆದ ಬಿ.ವಿ.ಎ. ಪದವಿ (ಎಸ್.ಇ.ಪಿ.) ಪಠ್ಯಕ್ರಮ ರಚನಾ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೧೬.೦೮.೨೦೨೪ರಂದು ಕನ್ನಡ ವಿಶ್ವವಿದ್ಯಾಲಯದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ೨೦೨೪-೨೫ನೇ ರಾಜ್ಯ ಶಿಕ್ಷಣ ನೀತಿ ಪಠ್ಯಕ್ರಮ ರಚನಾ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

೨೨೬.೦೭ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ೭ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಿಬ್ಬಂದಿಯವರಿಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಆಇ೨೧ ಎಸ್‌ಆರ್‌ಪಿ ೨೦೨೪ ಬೆಂಗಳೂರು, ದಿನಾಂಕ ೨೨.೦೭.೨೦೨೪ರನ್ವಯ ೭ನೇ ರಾಜ್ಯ ವೇತನ ಆಯೋಗವು (ಪರಿಷ್ಕೃತ ಮುಖ್ಯ ವೇತನ ಶ್ರೇಣಿ ಮತ್ತು ಪರಿಷ್ಕೃತ ೨೫ ಸ್ಥಾಯಿ ವೇತನ ಶಿಫಾರಸ್ಸುಗಳನ್ನು) ಶಿಫಾರಸ್ಸು ಮಾಡಿದೆ. ಸದರಿ ಪರಿಷ್ಕೃತ ವೇತನ ಶ್ರೇಣಿಗಳನ್ನು ದಿನಾಂಕ ೦೧.೦೭.೨೦೨೨ ರಿಂದ ಜಾರಿಗೊಳಿಸುತ್ತಾ, ವಿಶ್ವವಿದ್ಯಾಲಯದ ಆಡಳಿತ ಸಿಬ್ಬಂದಿಗಳಿಗೆ ೦೧.೦೮.೨೦೨೪ರಿಂದ ಜಾರಿಗೆ ಬರುವಂತೆ ಆರ್ಥಿಕ ಸೌಲಭ್ಯವನ್ನು ವಿಸ್ತರಿಸಿ ಅನುಷ್ಠಾನಗೊಳಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ೭ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಕರ್ನಾಟಕ ಸರ್ಕಾರದ ಆದೇಶದಂತೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಿತು.

೨೨೬.೦೮ ದಿನಾಂಕ ೦೧.೦೪.೨೦೦೬ರ ಪೂರ್ವದಲ್ಲಿ ನೇಮಕಾತಿ ಹೊಂದಿದ/ಸೇವೆಗೆ ಸೇರಿದ ಶ್ರೀ ನಾಗರಾಜನಾಯ್ಕ ಇವರನ್ನು ಹಿಂದಿನ ಡಿಫೈನ್ ಪಿಂಚಣಿ ಯೋಜನೆಗೆ ಒಳಪಡಿಸುವ ಕುರಿತು.

ಟಿಪ್ಪಣಿ : ಸರ್ಕಾರದ ಆದೇಶ ಸಂ: ಆಇ–ಪಿಇಎನ್/೯೯/೨೦೨೩, ದಿನಾಂಕ ೨೪.೦೧.೨೦೨೪ರನ್ವಯ ದಿನಾಂಕ ೦೧.೦೪.೨೦೦೬ರ ಪೂರ್ವದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗಾಗಿ ಹೊರಡಿಸಿದ ನೇಮಕಾತಿ ಅಧಿಸೂಚನೆಗಳ ಮೇರೆಗೆ ಆಯ್ಕೆ ಹೊಂದಿದ ದಿನಾಂಕ ೦೧.೦೪.೨೦೦೬ರಂದು ಅಥವಾ ಆ ದಿನಾಂಕದ ನಂತರ ಸೇವೆಗೆ ಸೇರಿದ ಕಾರಣದಿಂದಾಗಿ ನೂತನ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೊಳಪಟ್ಟಿರುವ ಸರ್ಕಾರಿ ನೌಕರರನ್ನು ಸರ್ಕಾರವು ಅವರ ಅಭಿಮತದ ಮೇರೆಗೆ ಹಾಗೂ ಷರತ್ತಿಗೊಳಪಟ್ಟು ಒಂದು ಬಾರಿಗೆ ಕ್ರಮವಾಗಿ ಹಿಂದಿನ ಡಿಫೈನ್ ಪಿಂಚಣಿ ಯೋಜನೆಯ ವ್ಯಾಪ್ತಿಗೊಳಪಡಿಸಲು ಸರ್ಕಾರವು ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಸುತ್ತೋಲೆ ಸಂ. ಕವಿಹಂ:ಉಕುಸ(ಆ) ವೇತನ:ಎನ್‌ಪಿಎಸ್:೨೦೨೪–೨೫/೧೬.೦೫.೨೦೨೪ರನ್ವಯ ಡಿಫೈನ್ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡಿಸುವಂತೆ ಕೋರಿ ಶ್ರೀ ನಾಗರಾಜನಾಯ್ಕ ಇವರು ಅಗತ್ಯ ದಾಖಲೆಗಳೊಂದಿಗೆ ಮನವಿ ಪತ್ರಗಳನ್ನು ಸಲ್ಲಿಸಿದ್ದು, ದಿನಾಂಕ ೩೦.೦೬.೨೦೨೪ರೊಳಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಹಿನ್ನೆಲೆಯಲ್ಲಿ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಕ್ರಮವಹಿಸಲಾಗಿದೆ. ಸದರಿ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಗಾಗಿ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಕೈಗೊಳ್ಳಲಾದ ಕ್ರಮಕ್ಕೆ ಅನುಮೋದನೆ ನೀಡಿತು.

೨೨೬.೯ ನಿರ್ದೇಶಕರು, ಅಧ್ಯಯನಾಂಗ ಇವರು ಸಲ್ಲಿಸಿರುವ ಪಿಎಚ್.ಡಿ. ಬಾಹ್ಯ ಮೌಲ್ಯಮಾಪಕರ ಪಟ್ಟಿಗಳ ಕುರಿತು.

ಟಿಪ್ಪಣಿ : ದಿನಾಂಕ ೦೮.೦೮.೨೦೨೪ರಂದು ನಡೆದ ಡೀನ್ ಸಮಿತಿ ಸಭೆಯ ನಡಾವಳಿಯನ್ವಯ ನಿರ್ದೇಶಕರು, ಅಧ್ಯಯನಾಂಗ ಇವರು ಸಲ್ಲಿಸಿರುವ ವಿವಿಧ ಅಧ್ಯಯನ ವಿಭಾಗಗಳ (ಭಾಷಾ ನಿಕಾಯ, ಸಮಾಜ ವಿಜ್ಞಾನಗಳ ನಿಕಾಯ, ಲಲಿತಕಲೆಗಳ ನಿಕಾಯ) ಪಿಎಚ್.ಡಿ. ಬಾಹ್ಯ ಮೌಲ್ಯಮಾಪಕರ ಅಂತಿಮ ಪಟ್ಟಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ನಿರ್ದೇಶಕರು, ಅಧ್ಯಯನಾಂಗ ಇವರು ಸಲ್ಲಿಸಿರುವ ಪಿಎಚ್.ಡಿ. ಬಾಹ್ಯ ಮೌಲ್ಯಮಾಪಕರ ಅಂತಿಮ ಪಟ್ಟಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೨೬.೧೦ ಡೀನ್ ಭಾಷಾ ನಿಕಾಯ ಇವರ ಅಧ್ಯಕ್ಷತೆಯಲ್ಲಿ ದಿನಾಂಕ ೧೪.೦೫.೨೦೨೪ರಂದು ನಡೆದ ಮಹಿಳಾ ಅಧ್ಯಯನ ಕೇಂದ್ರದ ತಾತ್ಕಾಲಿಕ 'ಡಿ' ಗ್ರೂಪ್ ಸಿಬ್ಬಂದಿ ಅವರ ವೇತನ ಸಂಬಂಧಿಸಿದ ಸಮಿತಿ ಸಭೆ ನಡೆವಳಿಗಳನ್ನು ೨೨೫ನೇ ಕಾರ್ಯಕಾರಿ ಸಮಿತಿ ೨೨೫.೦೬ ನಿರ್ಣಯದಂತೆ ಮರುಮಂಡಿಸುವ ಕುರಿತು.

ಟಿಪ್ಪಣಿ : ಜೂನ್ ೧೪, ೨೦೨೪ರಂದು ನಡೆದ ೨೨೫ನೇ ಕಾರ್ಯಕಾರಿ ಸಮಿತಿಯು ತೀರ್ಮಾನಿಸಿದಂತೆ, ಡೀನ್ ಭಾಷಾ ನಿಕಾಯ ಇವರ ಅಧ್ಯಕ್ಷತೆಯಲ್ಲಿ ದಿನಾಂಕ ೧೪.೦೫.೨೦೨೪ರಂದು ನಡೆದ ಮಹಿಳಾ ಅಧ್ಯಯನ ಕೇಂದ್ರದ ತಾತ್ಕಾಲಿಕ 'ಡಿ' ಗ್ರೂಪ್ ಸಿಬ್ಬಂದಿ ಅವರ ವೇತನ ಸಂಬಂಧಿಸಿದ ಸಮಿತಿ ಸಭೆ ನಡೆವಳಿಗಳನ್ನು ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮರುಮಂಡಿಸಲಾಗಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ, ೨೨೫ನೇ ಕಾರ್ಯಕಾರಿ ಸಮಿತಿ ವಿಷಯ ೬ಕ್ಕೆ ಸಂಬಂಧಿಸಿದಂತೆ ಮಹಿಳಾ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಮತ್ತು ಲಲಿತ ಕಲೆಗಳ ನಿಕಾಯದ ಡೀನ್, ಡಾ. ಶಿವಾನಂದ ವಿರಕ್ತಮಠ ಹಾಗೂ ಮಹಿಳಾ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಮತ್ತು ವಿಜ್ಞಾನಗಳ ನಿಕಾಯದ ಡೀನ್ ಡಾ. ಶೈಲಜ ಇಂ. ಹಿರೇಮಠ ಇವರುಗಳು ಜಂಟಿಯಾಗಿ ದಿನಾಂಕ ೧೪.೦೬.೨೦೨೪ ಮತ್ತು ೨೧.೦೬.೨೦೨೪ರಂದು ಸಮಿತಿಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳಿಗೆ ನೀಡಿರುವ ಮನವಿ ಪತ್ರಗಳನ್ನು ಸಭೆಯು ಪರಿಶೀಲಿಸಿ, ಈ ಇಬ್ಬರು ಡೀನರುಗಳ ಅಭಿಪ್ರಾಯಗಳನ್ನು ಕೆಳಗಿನಂತೆ ದಾಖಲಿಸಲು ಸಭೆ ತೀರ್ಮಾನಿಸಿತು.

೧. ಮಹಿಳಾ ಅಧ್ಯಯನ ವಿಭಾಗ, ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ 'ಡಿ' ಗ್ರೂಪ್ ಸಿಬ್ಬಂದಿಯಾದ ಶ್ರೀಮತಿ ಅಮರಮ್ಮ ಅವರ ಸೇವೆಯನ್ನು ಪರಿಗಣಿಸಿ, ಅವರನ್ನು ಮಹಿಳಾ ಅಧ್ಯಯನ ವಿಭಾಗದಲ್ಲಿ ಕ್ರೂಢೀಕೃತ ಸಿಬ್ಬಂದಿಯನ್ನಾಗಿ ಮುಂದುವರೆಸಲು ಶಿಫಾರಸ್ಸು ಮಾಡಿರುತ್ತಾರೆ.

೨. ಹಿಂದಿನ ಕಾರ್ಯಕಾರಿ ಸಮಿತಿ ೧೮೨, ೧೮೪, ಹಾಗೂ ೧೮೫ರ ಸಭೆಗಳಲ್ಲಿ ನಿರ್ಣಯಿಸಿ ಆದೇಶಿಸಿದಂತೆ ಶ್ರೀಮತಿ ಅಮರಮ್ಮ ಅಟೆಂಡರ್ ಅವರಿಗೆ ಮಹಿಳಾ ಅಧ್ಯಯನ ವಿಭಾಗ, ಕೇಂದ್ರ ಹಾಗೂ ಅಧ್ಯಯನ ಪೀಠಗಳಲ್ಲಿನ ಅವರ ಸೇವೆಯನ್ನು ಪರಿಗಣಿಸಿ, ಬಾಕಿ ಇರುವ ವೇತನವನ್ನು ಪಾವತಿಸಲು ಶಿಫಾರಸ್ಸು ಮಾಡಿರುತ್ತಾರೆ.

ಈ ಮೇಲ್ಕಂಡ ಅಭಿಪ್ರಾಯಗಳ ಕುರಿತಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾಲಯದ ನಿಯಮಾನುಸಾರ ಕ್ರಮಕೈಗೊಳ್ಳಬೇಕೆಂದು ನಿರ್ಣಯಿಸಿತು.

**೨೨೬.೧೧** ದಿನಾಂಕ ೨೨.೦೮.೨೦೨೪ರಂದು ನಡೆದ ೨೦೨೪–೨೫ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೨೨.೦೮.೨೦೨೪ರಂದು ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ, ಬೆಂಗಳೂರಿನಲ್ಲಿ ನಡೆದ ೨೦೨೪–೨೫ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨೨.೦೮.೨೦೨೪ರಂದು ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ, ಬೆಂಗಳೂರಿನಲ್ಲಿ ನಡೆದ ೨೦೨೪–೨೫ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೬.೧೨** ರುದ್ರ ಸಂಗೀತ ಮತ್ತು ನೃತ್ಯ ಅಕಾಡೆಮಿಯವರು ಕರ್ನಾಟಕ ಸಂಗೀತ–ಹಿಂದೂಸ್ಥಾನಿ ಸಂಗೀತ ಭರತನಾಟ್ಯಕ್ಕೆ ಪ್ರವೇಶಾತಿ ಪ್ರಾರಂಭಿಸಲು ಅನುಮತಿ ಕೋರಿರುವ ಬಗ್ಗೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ನಿಯಮಾನುಸಾರ ರುದ್ರ ಸಂಗೀತ ಮತ್ತು ನೃತ್ಯ ಅಕಾಡೆಮಿಗೆ ಕರ್ನಾಟಕ ಸಂಗೀತ–ಹಿಂದೂಸ್ಥಾನಿ ಸಂಗೀತ ಭರತನಾಟ್ಯಕ್ಕೆ ಪ್ರವೇಶಾತಿ ಪ್ರಾರಂಭಿಸಲು ಅನುಮೋದನೆ ನೀಡಿತು.

**೨೨೬.೧೩** ಡಾ. ಎ. ವೆಂಕಟೇಶ, ಉಪಕುಲಸಚಿವರು ಸದರಿ ಹುದ್ದೆಯಲ್ಲಿ ಎಂಟು ವರ್ಷಗಳ ಅರ್ಹತದಾಯಕ ಸೇವೆ ಸಲ್ಲಿಸಿದ ಹಿನ್ನೆಲೆಯಲ್ಲಿ ಆಯ್ಕೆ ದರ್ಜೆ ವೇತನ ಶ್ರೇಣಿಯನ್ನು ನೀಡಲು ಹಾಗೂ ಶ್ರೀ ಬಿ. ಗುರುಬಸಪ್ಪ, ಸಹಾಯಕ ಕುಲಸಚಿವರು ಇವರು ೧೫ ವರ್ಷಗಳ ವೇತನ ಶ್ರೇಣಿಗೆ ಮುಂಬಡ್ತಿಗೆ ಸಲ್ಲಿಸಿರುವ ಮನವಿಗಳ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಡಾ.ಎ. ವೆಂಕಟೇಶ, ಉಪಕುಲಸಚಿವರು ಮತ್ತು ಶ್ರೀ ಬಿ. ಗುರುಬಸಪ್ಪ, ಸಹಾಯಕ ಕುಲಸಚಿವರು ಇವರ ಮನವಿಗಳನ್ನು ಮತ್ತು ಇದರ ಜೊತೆಗೆ ಬೋಧಕೇತರ ಸಿಬ್ಬಂದಿಗಳ ಮುಂಬಡ್ತಿಗೆ ಸಂಬಂಧಿಸಿದ ವಿವರಗಳನ್ನು ಇಲಾಖಾ ಮುಂಬಡ್ತಿ ಸಮಿತಿಯಲ್ಲಿ ಮಂಡಿಸಲು ನಿರ್ಣಯಿಸಿತು.

**೨೨೬.೧೪** ಸಂಗೀತ ಮತ್ತು ನೃತ್ಯ ವಿಭಾಗದ ಬಿ.ಪಿ.ಎ. (ಹಿಂದೂಸ್ಥಾನಿ ಸಂಗೀತ) ಪದವಿಯ (ಎನ್.ಇ.ಪಿ.) ಪಠ್ಯಕ್ರಮಗಳ ಅನುಮೋದನೆ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಸಂಗೀತ ಮತ್ತು ನೃತ್ಯ ವಿಭಾಗದ ಬಿ.ಪಿ.ಎ. (ಹಿಂದೂಸ್ಥಾನಿ ಸಂಗೀತ) ಪದವಿಯ (ಎನ್.ಇ.ಪಿ.) ಪಠ್ಯಕ್ರಮಗಳಿಗೆ ನಿಯಮಾನುಸಾರ ಕ್ರಮಕೈಗೊಳ್ಳಲು ಸೂಚಿಸಿ ಅನುಮೋದನೆ ನೀಡಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

28.8.24

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು